

# ಜನರಿಲ್ಲದ ಕಾಂಕ್ರೀಟ್ ಕಾಡು!

**ಕಾ**ಡೆಂದರೆ ಅಲ್ಲಿ ಗಗನಚುಂಬಿ ಹಸಿರು ಮರಗಳಿರಬೇಕು. ಗಗನಚುಂಬಿ ಕಟ್ಟಡಗಳಿರುವ ನಾಡಿಗೆ 'ಕಾಂಕ್ರೀಟ್ ಕಾಡು' ಎಂಬ ಅಡ್ಡ ಹೆಸರಿದೆ. ಆದರೆ, ನಿಜವಾದ ಕಾಂಕ್ರೀಟ್ ಕಾಡೊಂದು ಇಲ್ಲಿದೆ ನೋಡಿ! ಆಕಾಶದೆತ್ತರಕ್ಕೆ ಚಾಚಿಕೊಂಡಿರುವ ಅಸಂಖ್ಯಾತ ಕಾಂಕ್ರೀಟ್ ಗೋಪುರಗಳ ದಂಡಿನ ಸಂದು–ಗೊಂದುಗಳಲ್ಲಿ ಒಂದಿಷ್ಟು ಹಸಿರು ಚಿಗುರುಗಳು.

ಇಂತದ್ದೊಂದು ವಿಶಿಷ್ಟ ಕಾಂಕ್ರೀಟ್ ಕಾಡು ಇರುವುದು ಮಡಗಾಸ್ಕರ್ ದ್ವೀಪದ 'ಟ್ಸಿಂಗಿ ದೆ ಬೆಮರಹ' ರಾಷ್ಟ್ರೀಯ ಉದ್ಯಾನದಲ್ಲಿ. ಇಲ್ಲಿ ಕಾಂಕ್ರೀಟ್ ಗೋಪುರಗಳಂತೆ ಕಾಣಿಸುವುದು ವಾಸ್ತವವಾಗಿ ನೈಸರ್ಗಿಕವಾಗಿಯೇ ರೂಪುಗೊಂಡಂತಹ ಸುಣ್ಣದ ಶಿಲೆಯ ರಚನೆಗಳು. ಒತ್ತೊತ್ತಾಗಿ ನಿಂತಿರುವ ಈ ಶಿಲಾಶಿಖರಗಳ ತಳದಲ್ಲಿ ಆಳವಾದ ಕಂದಕಗಳು, ಗುಹೆಗಳು ಇವೆ. ಇಂತಹ ಶಿಲಾರಚನೆಗಳಿಗೆ ಸ್ಥಳೀಯ ಭಾಷೆಯಲ್ಲಿ 'ಟ್ಸಿಂಗಿ' ಎನ್ನುವ ಹೆಸರು. 'ಯಾರೂ ಬರಿಗಾಲಲ್ಲಿ ನಡೆಯಲಸಾಧ್ಯವಾದ ಜಾಗ' ಎಂಬುದು ಇದರ ಅರ್ಥ. ಇದು ಸತ್ಯ ಕೂಡಾ. ಇಲ್ಲಿ ಅತ್ತಿತ್ತ ಸಾಗಬೇಕಾದರೆ, ಚೂಪು ಅಂಚುಗಳಿರುವ ಶಿಖರಗಳನ್ನು ಸ್ಪೈಡರ್ ಮ್ಯಾನಿನಂತೆ ಏರಿಳಿದು ದಾರಿ ಮಾಡಿಕೊಳ್ಳಬೇಕು. ಕಾಲುಜಾರಿಯೋ ಆಯ ತಪ್ಪಿಯೋ ಕೆಳಗೆ ಬಿದ್ದರೆ ಅಪಾಯ ಗ್ಯಾರಂಟಿ. ಅದರೂ ಇಲ್ಲಿಗೆ ಸಾಹಸಪ್ರಿಯ ಪ್ರವಾಸಿಗರು ಬರುತ್ತಾರೆ.

ಆಗೊಮ್ಮೆ ಈಗೊಮ್ಮೆ ಕಷ್ಟಪಟ್ಟು ಬರುವ ಪ್ರವಾಸಿಗರ ಹೊರತಾಗಿ ಇಲ್ಲಿ ಬೇರೆ ಯಾರೂ ಖಾಯಂ ಆಗಿ ವಾಸವಾಗಿರಲು ಸಾಧ್ಯವಿಲ್ಲ. ಮನುಷ್ಯ ಜೀವಿಗಳ ಅಪಾಯವಿಲ್ಲದ ಕಾರಣ ಇಲ್ಲಿನ ವಿಶಿಷ್ಟ ಪರಿಸರದಲ್ಲಿ ಇನ್ನಿತರ ಜೀವಜಾತಿಗಳ ವೈವಿಧ್ಯ ಅಪಾರವಾಗಿದೆ. ಹೊರಜಗತ್ತು ಕಂಡರಿಯದ ಹೊಸಬಗೆಯ ಜೀವಜಾತಿಗಳು ಇಲ್ಲಿ ಹೆಜ್ಜೆಹೆಜ್ಜೆಗೂ ಭೇಟಿಯಾಗುತ್ತವೆ. ಅಜ್ಞಾತ ಜೀವಿಗಳ ಪತ್ತೆಯಲ್ಲಿ ಆಸಕ್ತರಾಗಿರುವ ಜೀವವಿಜ್ಞಾನಿಗಳ ಪಾಲಿಗೆ ಈ ಅಪರೂಪದ ಕಾಡೊಂದು ಅಕ್ಷಯ ಪಾತ್ರೆಯಂತೆ! ಎರಡು ಹೊಸ ಜಾತಿಯ ಲೆಮೂರ್ ಕೋತಿಗಳು, ಒಂದು ಕಪ್ಪೆ, ಒಂದು ಬಾವಲಿ ಈಗಾಗಲೆ ಇಲ್ಲಿಂದ ಜಗತ್ತಿಗೆ ಪರಿಚಯಿಸಲ್ಪಟ್ಟಿವೆ. ಇನ್ನೆಷ್ಟು ಕಾಯುತ್ತಿವೆಯೋ..?

■ ಜಯಕರ